ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/127/ಪ್ರಾಹುಸ್ಥ/ಬಸ್ಥಾವಿ/2016-17/ಭಾಗ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 13/10/.2021

## ಸುತ್ತೋಲೆ

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಿಗೆ ಯುಜಿಸಿ ವೃತ್ತಿ ಪದೋನ್ನತಿಯ ನಿಯಮಗಳಡಿಯಲ್ಲಿ ಪ್ರಾಧ್ಯಾಪಕರ (ಪ್ರೊಫೆಸರ್) ಹುದ್ದೆಗೆ ಸ್ಥಾನೀಕರಣಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.

ಉಲ್ಲೇಖ :
1. ದಿನಾಂಕ : 16.03.2019ರ ಸಂಖ್ಯೆ : ಇಡಿ 483 ಯುಎನ್‌ಇ 2017 ರ ಸರ್ಕಾರದ ಆದೇಶ.
2. ದಿನಾಂಕ : 02.03.2021 ರ ಸಂಖ್ಯೆ : ಇಡಿ 123 ಡಿಸಿಇ 2020 ರ ಸರ್ಕಾರದ ಆದೇಶ.
3. ದಿನಾಂಕ: 08.10.2021ರ ಸಮ ಸಂಖ್ಯೆಯ ಸುತ್ತೋಲೆ.

** ** **

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಸಹ ಪ್ರಾಧ್ಯಾಪಕರುಗಳ ಗಮನಕ್ಕೆ ತರುವುದೇನೆಂದರೆ 2016ರ ಯು.ಜಿ.ಸಿ. ವೇತನ ಶ್ರೇಣಿಗಳನ್ನು ಉಲ್ಲೇಖ-1ರ ಸರ್ಕಾರದ ಆದೇಶದಲ್ಲಿ ಜಾರಿಗೊಳಿಸಲಾಗಿರುತ್ತದೆ ಹಾಗೂ ಉಲ್ಲೇಖ-2ರ ಸರ್ಕಾರದ ಅದೇಶದಂತೆ 2018ರ ಯು.ಜಿ.ಸಿ.ಯ ನಿಯಮಗಳನ್ನು ಅಳವಡಿಸಲಾಗಿರುತ್ತದೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರಿಗೆ ಸಿ.ಎ.ಎಸ್. ಅಡಿಯಲ್ಲಿ ರೂ.10000/- ಎ.ಜಿ.ಪಿ.ಯೊಂದಿಗೆ ಪ್ರಾಧ್ಯಾಪಕರ/ಪ್ರೊಫೆಸರ್ ಹುದ್ದೆಗೆ ಸ್ಥಾನೀಕರಣ/ಪದೋನ್ನತಿ ನೀಡುವ ಸಲುವಾಗಿ ಕಾಲೇಜು ಶಿಕ್ಷಣ ಆಯುಕ್ತರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ. ಉಲ್ಲೇಖ (03)ರಲ್ಲಿ ದಿನಾಂಕ: 18.08.2018ರಂದು ಪ್ರಕಟಿಸಲಾಗಿರುವ ಯುಜಿಸಿ 2018ರ ನಿಯಮಗಳನ್ವಯ ಸಹ ಪ್ರಾಧ್ಯಾಪಕರು ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ತಮಗೆ ಅನ್ವಯವಾಗುವ ಮಾನದಂಡವನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಲಾಗಿರುತ್ತದೆ.

ಉಲ್ಲೇಖ (03)ರ ಸುತ್ತೋಲೆಯನ್ನು ಮುಂದುವರೆಸುತ್ತಾ ಸದರಿ ಸುತ್ತೋಲೆಯಲ್ಲಿ ತಿಳಿಸಿರುವ ಮಾಹಿತಿಗಳನ್ವಯ ಪ್ರಾಧ್ಯಾಪಕ ಹುದ್ದೆಗೆ ಅರ್ಹರಾಗಿರುವ ಸಹ ಪ್ರಾಧ್ಯಾಪಕರುಗಳ ಪ್ರಸ್ತಾವನೆಗಳನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಪ್ರತಿ ತಿಂಗಳು 15ನೇ ತಾರೀಖಿನೊಳಗೆ ಸಲ್ಲಿಸಲು ಸೂಚಿಸಲಾಗಿದೆ. ಪ್ರಾಂಶುಪಾಲರು ತಮ್ಮ ಹಂತದಲ್ಲಿ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಕಾಲೇಜು ಹಂತದ ಪರಿಶೀಲನಾ ಸಮಿತಿಯ ಮೂಲಕ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಅದೇ ತಿಂಗಳು 30ನೇ ತಾರೀಖಿನೊಳಗೆ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

13/10/21

ಕಾಲೇಜು ಶಿಕ್ಷಣ ನಿರ್ದೇಶಕರು